Founded 1917 SATYAVADI Oldest Newspaper of Mysore Daily & Weekly Reg No. M 1299

ಸತ್ಯವಾದಿ

ಸಂಪುಟ 26 ಸಂಚಿಕೆ 243] ಬ.ಫೆಬ್ರವರಿ 15—4—1943 [3 ಪೈ

ವರ್ತಮಾನ

——

ಆಸ್ಟ್ರೇಲಿಯಾ ಭೂ ಸೈನ್ಯದ ಕಮ್ಯಾಂಡರ್-ಇನ್-ಛೀಫರಾದ ಜನರಲ್ ಬ್ಲೇಯಿಮಿ-ವರು ಒಪಾಸ್ಯೆಯರ ಆಸ್ಟ್ರೇಲಿಯಾಕ್ಕೆ ಉತ್ತರದಲ್ಲಿ ಎರಡೂ ಲಕ್ಷ ಸೈನ್ಯವನ್ನೂ ಹೇರಲಾದ ವಿಮಾನಗಳನ್ನು ಶೇಖರಮಾಡಿಕೊಂಡಿರುವರು. ಯಾವಾಗಬೇಕಾದರೂ ಬೇಳಬಹುದು ಎಂದು ವರ್ತಮಾನ ಪತ್ರಿಕೆಯ ಸಂದರ್ಶಿಗಾರರಿಗೆ ಹೇಳಿದರಂತೆ.

ಭೂಪಾಲನಲ್ಲಿ ನ್ಯಾಷನಲ್ ವಾರ್ ಫ್ರಂಟ್ ಸ್ಥಾಪನೆಯಾಗಿ ಒಂದು ವರ್ಷವಾಯಿತು. ಈಗಾಗಲೇ 1 ಲಕ್ಷಕ್ಕಿಂತ ಹೆಚ್ಚು ಮೆಂಬರಿರುವರು.

ಮುಂಬಯಿ ಹೈ ಕೋರ್ಟಿಗೆ ಸೀನಿಯರ್ ಜಡ್ಜಿಯಿದ್ದರೂ ಬಬ್ಬ ಆಂಗ್ಲೇಯ ಬ್ಯಾರಿಸ್ಟರ್‌ಗೆ ಛೀಫ್ ಜಡ್ಜಿ ಕೆಲಸ ಕೊಟ್ಟರೆಂದು ಮುಂಬಯಿ ವಕೀಲರು ಸಭೆ ಕೂಡಿ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು.

ಕಳೆದ ಮೂರು ವರ್ಷಗಳಿಂದಲೂ ಇಂಡಿಯಾ ಮಂತ್ರಿಗಳಾದ ಮಿ|| ಅಮೆರಿಯವರ ಪಾರ್ಲಿಮೆಂಟ್ ಸಭೆಯಲ್ಲಿ ಭಾಷಣ ಮಾಡುವಾಗೆಲ್ಲ ಹೆಳದ್ದನ್ನೇ ಹೇಳುತ್ತಾ ಒಂದಿರುವುದರಿಂದ ಈ ಕಾಗದದ ಕೊರತೆಯಲ್ಲಿ ಆ ಭಾಷಣಗಳನ್ನೆಲ್ಲ ಪಾರ್ಲಿಮೆಂಟ್ ರಿಪೋರ್ಟ್‌ಗಳಲ್ಲಿ ಪ್ರಿಂಟ್ ಮಾಡಿಸುವುದು ಅವಶ್ಯಕವೇ ? ಎಂದು ಡೈಲಿ ಹೆರಾಲ್ಡ್ ಪತ್ರಿಕೆಯು ಕೇಳಿರುತ್ತದೆ.

ಕೆನಡಾದಲ್ಲಿ ಸದ್ಯದಲ್ಲಿ ಸೇರುವ ಪಾರ್ಲಿಮೆಂಟಿನಲ್ಲಿ ಒಂದು ಸಾವಿರ ಮಿಲಿಯನ್ ಡಾಲರು ಮಿತ್ರ ಪಕ್ಷದವರಿಗೆ ಧರ್ಮವಾಗಿ ಕೆನಡಾದಲ್ಲಿ ತಯಾರಾಗುವ ವಸ್ತುಗಳ ರೂಪದಲ್ಲೇ ಕೊಡುವೇಕೆಂದು ಸರ್ಕಾರದವರು ಒಂದು ಠರಾವನ್ನು ತಂದಿರುವರು.

ಅಮೆರಿಕಾಕ್ಕೂ, ರಷ್ಯಾಕ್ಕೂ, ಚೈನಾ ಟೀಯನ್ನು ವಿಶೇಷವಾ ಕಳುಹಿಸುವುದೆಂದು ಚೈನಾ ಸರ್ಕಾರದವರು ಹೇಳಿರುವರು.

ಯರವಾಡ ಪೆಂಗಸಾನ ಜೈಲಿನಲ್ಲಿ ಮಿತಿಮೀರಿದಷ್ಟು ಕೈದಿಗಳನ್ನು ಸೇರಿಸಿರುತ್ತಾರೆಂದು ಸರ್ವಮಾನ ಪತ್ರಿಕೆಗಳಲ್ಲಿ ಬರೆದ ಸಂಗತಿ ನಿರಾಧಾರವಾದುದೆಂದು ಸರ್ಕಾರವವರು ಪ್ರಕಟನೆ ಹೊರಡಿಸಿರುತ್ತಾರೆ.

ಜರ್ಮನಿಯ ಸಾಲ ಏರುತ್ತಿದೆ

ಜರ್ಮನಿಯ ಸಾಲವು ಹಿಟ್ಲರ್ ಕೆಲಸಕ್ಕೆ ಬಂದಾಗ 590 ಮಿಲಿಯ ಪೌಂಡು ಇತ್ತು. ಇವನು ಕೆಲಸಕ್ಕೆ ಬಂದ ಒಂದು ವರ್ಷಕ್ಕೆ 900 ಮಿಲಿಯ ಪೌಂಡಿಗೆ ಏರಿತು. 1940 ರಲ್ಲಿ 1000 ಮಿಲಿಯನ್ನಾಯಿತು. 1941 ರಲ್ಲಿ 2500 ಮಿಲಿಯವಾಯಿತು. ಈಗ 9300 ಮಿಲಿಯ ಪೌಂಡಿಗೆ ಬಂದಿದೆ.

ಟ್ಯುನಿಷಿಯಾದಲ್ಲಿ ಜರ್ಮನಿಗೆ ಚ್ರಿಟಿಷರಿಗೆ ಜಯ

ಟ್ಯುನಿಷಿಯಾದಲ್ಲಿ ಆಂಗ್ಲೇಯರು ಹಾದು ವ್ಯಾಲಿಂಗ್ ಟೈನ್ ಕ್ರೂಸೇಡರ್ಸ್ ಟ್ಯಾಂಕುಗಳನ್ನು ಉಪಯೋಗಿಸುತ್ತಿದ್ದರು. ಈಗ ಹೊಸ ವ್ಯಾನ್ ಟಾಂಕುಗಳನ್ನು ಉಪಯೋಗಿಸುತ್ತಿರುವರು. ಬ್ರಿಟಿಷ್ ಗಸೇ ದಳವು ಅಟ್ಲಾಂಟಿಕ್‌ನಿಂದಲೇ ಪೆಸರಾಸಿ ಪಡೆದಿದೆ ಎನ್ನಬಹುದು. ಕೈ ಸೆರೆಯಾದ ಇಟಾಲಿಯನ್ ಸಿಪಾಯಿಗಳು ತನುಗೆ ಸಾಯಾದ ಯುದ್ಧ ಸಾಮಗ್ರಿಗಳನ್ನು ಕೊಡುತ್ತಿಲ್ಲವೆಂದು ಹೇಳುತ್ತಿರುವರು.

ರಣರಂಗ

ಟ್ಯುನಿಷಿಯಾ ಉತ್ತರದಲ್ಲಿ ಆಕ್ಸಿಸ್ ಸೈನ್ಯಗಳು ಒಂದೇ ಸಮನೆ ಓಡಿಹೋಗುತ್ತಿವೆ. ಪೂರ್ವದ ಕಡೆ ಉಳಿದ ಇಟಾಲಿಯನ್ ಸೈನ್ಯಗಳನ್ನು ಸುತ್ತುಗಟ್ಟುತ್ತಿರುವುದು ಜನರಲ್ ಮಾಂಟ್‌ಗಮರಿಯ ಸೇನೆಗಳು ಎಫಿಡಿವಿಲ್ ರೇವಿನ ಬಾಗಿಲಿಗೆ ಬಂದಿದೆ. ಈ ರೇವು ಶತ್ರುಗಳ ಮುಖ್ಯ ವಿಮಾನ ನಿಲ್ದಾಣವಾಗಿದೆ. ಅಲ್ಲಿ ಇಟಾಲಿಯನ್ ವಿಟ್ಟೋರಿಯಾ ಡಿವಿಜನ್ ಪೂರ್ತಿಯಾಗಿ ಆಂಗ್ಲೇಯರಿಗೆ ಸೆರೆಸಿಕ್ಕಿದರು. ಓಡುತ್ತಾ ಇರುವ ಜರ್ಮನರು ಇನ್ನೂರ ವಾಹನಗಳನ್ನು ಅಪಹರಿಸಿಕೊಂಡು ಹೋದರು. ಇಂಗ್ಲಿಸರೂ, ಅಮೆರಿಕಾದವರೂ, ಫ್ರೆಂಚರೂ ಎಲ್ಲ ಶತ್ರುಗಳನ್ನು ಇಕ್ಕಟ್ಟಾದ ಬ್ಯೂನಿಸ್ ಕಡೆಯಲ್ಲಿ ಜೋಸಿನಂತೆ ಶತ್ರು ಕಟ್ಟಿಕೊಂಡಿರುತ್ತಾರೆ.

ರಷ್ಯಾ ರಣರಂಗದಲ್ಲಿ ರಷ್ಯನರ ಮುನ್ನುಗ್ಗಾಟ ಹೆಚ್ಚಾಗಿದೆ.

ವಿವಿಧ ವರ್ತಮಾನ

ಹಿಟ್ಲರೂ ರೋಂ ನಿವಾಸಿ ಮಂತ್ರಿಯು ಒಟ್ಟಿಗೂಡಿ ಎರಡು ದಿವಸ ಮಾತುಕತೆ ನಡಸಿದರು. ಏನರ ಪ್ರಕಟಿಸಿಲ್ಲ

ಕಾಲರಾ ಪ್ರದೇಶಗಳಿಂದ ಯಾತ್ರಾದಿಗಳು ಬರುವುದರಿಂದ ಯಳಂದೂರಿನಲ್ಲಿ ಉಪದ್ರವವು ಹರಡಬಹುದೆಂದು ಈ ತಿಂಗಳು 2 ರಲ್ಲಿ ಬಿಳಿಗಿರಿರಂಗ ಬೆಟ್ಟದಲ್ಲಿ ನಡೆಯುವ ದೊಡ್ಡ ಜಾತ್ರೆಗೆ ಯಾರನ್ನೂ ಸೇರಿಸುವುದಿಲ್ಲ.

ಅಕ್ಸಿಸವರ ಯದ್ಧದಲ್ಲಿ ಕೈದಿಗಳಾಗಿ ಅಂಗಚೀನರಾಗಿರುವವರನ್ನು ಇಷ್ಟೇ ಮಂದಿ ಮಿತ್ರ ಪಕ್ಷದವರಲ್ಲಿರುವವರನ್ನು ತುಕ್ಕಿಯ ಒಂದು ರೇವಿನಲ್ಲಿ ಇದೇ ತಿಂಗಳು 17 ರಲ್ಲಿ ಒಬ್ಬರಿಗೊಬ್ಬರು ಒದಲಾಯಿಸಿಕೊಳ್ಳುವರು.

ಅಮೆರಿಕಾಕ್ಕೆ 1500 ಮಿಲಿಯನ್ ಪೌಂಡುಗಳನ್ನು ಕೊಟ್ಟಿದೆ. ರಷ್ಯಾಕ್ಕೆ ಒದಗಿಸಿದ ಸಾಮಾನಿನ ಮೊತ್ತ 170 ಮಿಲಿಯನ್ ಪೌಂಡು 1940 ರಲ್ಲಿ ಆಂಗ್ಲೇಯರು ಪ್ರತಿದಿವಸವೂ 5 ಮಿಲಿಯನ್ ಪೌಂಡು ಖರ್ಚು ಮಾಡುತ್ತಿದ್ದರು.

ವರ್ತಮಾನ

——

ಚೈನಾ ಅಮೆರಿಕಾ ಇನ್‌ಸ್ಟಿಟ್ಯೂಟ್ ಆಫ್ ಕಲ್ಚರಲ್ ರಿಲೇಷನ್ 47 ನೇ ವರ್ಧಂತಿಯಲ್ಲಿ ಡಾ|| ಕಿಸ್ವೆಷಾರವರು ಫೆಸಿಪಿಕ್ ರಣರಂಗವು ಜಲವಾಗಬೇಕಾದರೆ ಇಂಡಿಯಾಕ್ಕೆ ಬೇಗ ಸ್ವಾತಂತ್ರ್ಯ ಕೊಡಬೇಕೆಂದರು. ಅಲ್ಲದೆ ಈಗ ಅಮೆರಿಕಾದವರ ಚೀನೀಯರಿಗೆ ಅಮೆರಿಕಾದಲ್ಲಿ ಮಾಡಿರುವ ಅನೇಕ ನಿರ್ಬಂಧಗಳನ್ನು ತೆಗೆದು ಹಾಕಬೇಕೆಂದರು.

ಗ್ರಾಮ ಸ್ವಪರಿಪಾಲನಾ ಪದ್ಧತಿಯ ನೆಲೆಗೊಳ್ಳದೆ ಭಾರತ ದೇಶದಲ್ಲಿ ಪ್ರಜಾ ಸ್ವಾತಂತ್ರ್ಯ ಪ್ರಭುತ್ವವು ರಾಯಲ್ ಸೊಸೈಟಿಯಲ್ಲಿ ಸರ್ ಮಾಲ್‌ಕೋಂ ಡಾರ್ಲಿಂಗರವರು 2—4—43 ರಲ್ಲಿ ಲಂಡನ್ನಿನಲ್ಲಿ ತಿಳಿಸಿದರು. ಸರ್ ಮಾಲ್‌ಕೋಲಂರವರು ಹಿಂದೆ ಪಂಜಾಬಿನಲ್ಲಿ ಫೈನಾನ್ಸಿಯಲ್ ಕಮಿಷನರಾಗಿದ್ದರು.

ಹಿಂದೂಸ್ತರದ ಸಮಾಪದಲ್ಲಿರುವ ಕೆ ಮೃಗಾನಪಲ್ಲೆ ಎಂಬ ಗ್ರಾಮದಲ್ಲಿ ಹಿಟ್ಟು ಹರಿಜನ ಸ್ತ್ರೀಯು ಸುಮಾರು 3 ದಿನಗಳು ಆಹಾರವಿಲ್ಲದೆ ಕ್ಷುದ್ಬಾಧೆಯಿಂದ ಮರಣಹೊಂದಿದಳು. ಆಕೆಗೆ ಗಂಡನಿರಲಿಲ್ಲ. ಇಂತಹ ದುರ್ಘಟನೆಗಳು ಎಷ್ಟೋ ಕಡೆ ನಡೆಯುತ್ತಿರಬಹುದಲ್ಲವೆ?

ಸೋವಿಯಟ್ ಸೈನ್ಯಗಳ ಹಿಂಬದಿಯಲ್ಲಿ ರಸ್ತೆಗಳೂ ರೈಲುದಾರಿಗಳೂ ವಾಯು ವೇಗ ಮಾರ್ಗೋಪೇಗಗಳಲ್ಲಿ ಪುನರ್ನಿರ್ಮಾಣವಾಗುತ್ತಲಿವೆ. ಜರ್ಮನರಿಗೆ ಸರಿಯಾದ ಬುದ್ಧಿಕಲಿಸಲು ಈಯತ್ನಗಳು ನಡೆಯುತ್ತಿವೆ.

1—4—43 ರಿಂದ ಜನರಿಗೆ ಮಾರಲಿಕ್ಕಾಗಿ ರಾಷ್ಟ್ರೀಯ ಸರ್ಕಾರದವರಿಗೆ 14,000 ಪೌಂಡುಗಳ ಕ್ವಿನೈನು ಸಪ್ಲೈ ಮಾಡಲ್ಪಡುತ್ತಿದೆ.

ಜನತೆಯು ಯುದ್ಧ ಕಾಲದಲ್ಲಿ ಅನಸ್ಥಾರ್ಥಲೆದ ವೇಸ್ಟಿಗೆ ಹಾಕಲಿಕ್ಕೆ ನಮ್ಮ ಚಕ್ರವರ್ತಿಗಳಾದ ಅರಸೇ ಜಾರ್ಜ್ ಪ್ರಭುಗಳು ತಮಗೆ ಪುಸ್ತಳವಾದ ಕೆಲಸವಿದ್ದರೂ ವಾರಕ್ಕೆರಡು ಸಾರಿ ಒಂದು ವಿಮಾನ ನಿರ್ಮಾಣ ಕಾರ್ಯಾಲಯದಲ್ಲಿ ಮಿ|| ತಾಸು ಕೈಕೆಲಸ ಮಾಡುವ ಕಾರ್ಯಕ್ರಮವನ್ನು ಕೈಗೊಂಡಿರುವರು.

Meet the India's Greatest
Character-Actor
CHANDRAMOHAN
in
R O T I
(Hindi)
At —— Ranjit
From 16—4—43
Daily 3 Shows

ಚಂದ್ರಮೋಹನ್ ಪಾತ್ರವುಳ್ಳ
ರೊ ಟಿ
(ಹಿಂದಿ)
ರ ಣ ಜಿ ತ್ ನ ಲ್ಲಿ
16—4—43 ನಿಂದ
ಪ್ರತಿ ದಿನ 3 ಆಟಿಗಳು

ಅಕ್ಕ ಸಾಮಾಜಿಕ
ಭಾವಪರಿಪೂರ್ಣವಾದ ಕಥೆ
ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವ ವರೆಗೂ ಊಟಕ್ಕೆ ಕೂಡ ಏಳಲು ಮನ ಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು
ದೊರೆಯುವ ಸ್ಥಳ—
ಸತ್ಯವಾದಿ ಆಫೀಸ್ ಮೈಸೂರು
ಶ್ರೀ ರಾಮಚಂದ್ರ ಬುಕ್ ಡಿಪೋ
ದೇವರಾಜ ಮಾರ್ಕೆಟ್, ಮೈಸೂರು

ಪಿ. ಮಂಜಪ್ಪ ಮರ್ಚೆಂಟ್
ಮಂಗಳೂರು ಗಣಪತಿ, ಸುವರ್ಣಾ ಗಜಾನನ ಬೀಡಿಗಳನ್ನೆ ಉಪಯೋಗಿಸಿ
ಹಳೇ ಅಗ್ರಹಾರ, ಮೈಸೂರು.

For good printing
Saraswati Printing Press
Lansdowne Buildings, Mysore
Lakshminarasimha Press
Srirampet, Mysore

ಬೇಕಾಗಿದ್ದಾರೆ
ಮೈಸೂರಿನ ಎಲ್ಲಾ ಕಡೆಗಳಲ್ಲಿಯೂ ಪತ್ರಿಕೆಯನ್ನು ಮಾರಲೂ, ಚಂದಾದಾರರಿಗೆ ಕೊಡಲೂ ಕೆಲವರು ಬೇಕಾಗಿದ್ದಾರೆ.
ಹೆಚ್ಚು ವಿಷಯಗಳನ್ನು ಮೊಖ್ತಾ ವಿಚಾರಿಸಿ ತಿಳಿಯಬಹುದು.
ಮ್ಯಾನೇಜರ್, ಸತ್ಯವಾದಿ ಪ್ರೆಸ್
ಚಾಮರಾಜಪುರಂ, ಮೈಸೂರು.

ಭಂಗಾರ ಬೆಳ್ಳಿ ಧಾರಣೆ

ಸವರನ್	ರೂ.	55-4-0
ಬಂಗಾರ ತೊಲ	ರೂ.	77-10-0
ಬೆಳ್ಳಿ	,,	1-2-0

ಹೆಚ್. ಆರ್. ಜಿ. ಸಿ. ಯವರ
ಶ್ರೀ ಪಿಕ್ಚರ್ಸ್ ತಯಾರಿಕೆ
ವಾಣಿ ಅಥವಾ **VIOLINIST**
ಎಂಬ ಕನ್ನಡ ಸಾಮಾಜಿಕ ಚಿತ್ರ
ನಿಮ್ಮ ಮನರಂಜನೆಗಾಗಿ ಬೇಗಲೇ ಬರಲಿದೆ
ಸಂಗೀತರತ್ನ ಟಿ. ಚೌಡಯ್ಯ, ಕಲ್ಚರ್ಡ್ ಕಮೆಡಿಯನ್ ಕೆ. ಹಿರಣ್ಣಯ್ಯ, ಗಾಯನಗಾಂಧರ್ವ ಚಂಪೆ ವೈದ್ಯನಾಥ ಭಾಗವತರ್ ಮೃದಂಗವಿದ್ವಾನ್ ಮಣಿ ಕೋಕಿಲಕಂಠ ಬಳ್ಳಾರಿ ಲಲಿತ, ಚಂದ್ರಮ್ಮ, ರತ್ನ, ಪಂಡರೀಬಾಯಿ, ಧನಭಾಗ್ಯಂ ಎ. ನಾರಾಯಣರಾವ್, ಕೆ. ಎಂ. ಮಹದೇವ್, ಮಾಸ್ಟರ್ ಪಿ. ಎ. ಕೆ. ಮೂರ್ತಿ ಬಿ. ಎಸ್. ಸುಬ್ಬಯ್ಯ, ಎಂ. ಮಾಧವರಾವ್, ಎ. ಸುಬ್ಬಣ್ಣ, ಎಂ. ಆರ್. ಪಿ. ಸಾರಥಿ ಶ್ರೀಮತಿ ಕೆ. ಆರ್, ಶಾಂತಕುಮಾರಿ ಮುಂತಾದವರು ತಾರಾಗಣದಲ್ಲಿದ್ದಾರೆ.
ನಿರ್ದೇಶಕರ — ಜಿ. ಆರ್. ರಾಮಯ್ಯನವರು
ಸಂಗೀತ ನಿರ್ದೇಶಕರು— ಸಂಗೀತರತ್ನ ಟಿ. ಚೌಡಯ್ಯನವರು
ತಯಾರಿಕೆ— ಸಹಕಾರ್ ಟಿ. ಎಸ್. ಶಿವಬಸವಸ್ವಾಮಿ
ಕಥಾ ಮತ್ತು ದಿಗ್ದರ್ಶಕರು— ಕೆ. ಹಿರಣ್ಣಯ್ಯ ಮತ್ತು ಎಂ. ಎಸ್. ಗೋಪಾಲ್.
ಸ್ಟೂಡಿಯೋ—ಸೆಂಟ್ರಲ್ ಸ್ಟೂಡಿಯೋಸ್ ಲಿಮಿಟೆಡ್, ಕೊಯಂಬತ್ತೂರು.

Edited, Printed & published by M. S. Krishna Rao, at the Satyavadi Press. Chamaraja Agrahar, Mysore.

ಶ್ರೀ ಸ್ವಭಾನು ನಾಮ ಸಂವತ್ಸರದ ಫಲ.

ಸಂವತ್ಸರ ಫಲ— ಮಳೆಯು ಚೆನ್ನಾಗಿ ವರ್ಷಿಸಿ, ಬೆಳೆಗಳು ಚೆನ್ನಾಗಿ ಲಭಿಸುವವು. ಆದರೆ ದೇಶೋಪದ್ರವಗಳು ಕಡಮೆಯಾಗುವುದಿಲ್ಲ. ಪ್ರಜೆಗಳಿಗೆ ಸುಖವಿರುವುದಿಲ್ಲ, ವರ್ಷಲಗ್ನವು ಮಕಂವಾಗಿ, ಭಾಗ್ಯಾಧಿಪತಿಯು ನೀಚನಾಗಿ, ತೃತೀಯ ಷಷ್ಠಾಧಿಪತಿಗಳಿಗೆ ಸರಿವರ್ತನವುಂಟಾಗಿರುವುದರಿಂದ ಪ್ರಜೆಗಳು ಆಹಾರಪದಾರ್ಥಗಳಿಲ್ಲದೆ ಬಾಡಿಹೋಗುತ್ತಾ ರೋಗಾದಿಗಳಿಂದ ಬಾಧೆಯನ್ನು ಹೊಂದುವರು. ಯುದ್ಧಭಯವಿದ್ದರೂ ಪ್ರಭುಗಳಿಗೆ ವಿಜಯವು ಲಭಿಸುತ್ತಿರುತ್ತದೆ.

ಅಹ್ಲಾದ ಪ್ರಾಗೂ ತನುವು ಇವುಗಳೇ ತಾನಾಗಿರುವ ಚಂದ್ರನು ರಾಜನಾಗಿರುವುದರಿಂದ ದೇಶಕ್ಕೆ ಕ್ಷೇಮಾಭ್ಯುದಯವೂ ಸ್ವಾತಂತ್ರ್ಯ ಲಾಭವೂ ಸೂಚಿಸಲ್ಪಟ್ಟಿದೆ. ಕುಜನು ಸೇನಾಧಿಪತಿಯಾಗಿರುವುದರಿಂದ ಅಗ್ನಿಭಯವೂ ಯುದ್ಧಭಯವೂ ಪ್ರಾಪ್ತವಾಗುವವೆಂದು ಹೇಳಬೇಕಾಗುತ್ತದೆ. ಅಂಗಾರಕನೇ ಅರ್ಘಾಧಿಪತಿಯಾಗಿರುವ ಕಾರಣ ಆಹಾರ ಪದಾರ್ಥಗಳಿಗೂ ಬೆಲೆಯು ಮಿತಿಮೀರಿ ಹೆಚ್ಚುವುದು.

ಗ್ರಹಕೂಟಗಳು— ತ್ರಿಗ್ರಹ, ಪಂಚಗ್ರಹ, ಕೂಟಗಳು ಹೆಚ್ಚಾಗಿರುವುದರಿಂದ ಲೋಕಾರಿಷ್ಟಗಳೂ, ರಾಷ್ಟ್ರನಾಶವೂ, ಯುದ್ಧಭೀತಿಯೂ ಕಂಡುಬರುತ್ತವೆ.

ನವನಾಯಕರು— ರಾಜರೂ, ಮಂತ್ರಿಗಳೂ ಪರಸ್ಪರ ಸ್ನೇಹದೊಂದಿಗೆ ವರ್ತಿಸುವರು, ಬೆಳೆಗಳು ಚೆನ್ನಾಗಿ ಬೆಳೆಯುವವು. ಪದಾರ್ಥಗಳ ಬೆಲೆಯು ಹೆಚ್ಚುವದು. ವ್ಯಾಪಾರಸ್ಥರು ತಲೆಕೆಳಗಾಗುವರು. ಪಶುಗಳಿಗೆ ರೋಗಾದ್ಯುಪದ್ರವಗಳ ಭೀತಿಯುಂಟು. ಹತ್ತಿ, ಬೆಳ್ಳಿ, ಬಂಗಾರಗಳಿಗೆ ಬೆಲೆ ಹೆಚ್ಚುವುದು.

ಗ್ರಹಣ— 18-8-43 ನೇ ದಿನ ಚಂದ್ರಗ್ರಹಣ ಬರುತ್ತದೆ.

ದುರ್ಭಿಕ್ಷಗಳು— ಬೃಹಸ್ಪತಿಗೆ ರಾಶಿತ್ರಯ ಸಂಚಾರವಿರುವುದರಿಂದ ಪ್ರಜಾಕ್ಷಯವು ಹೆಚ್ಚು, ಕಾಲಸರ್ಪಯೋಗವು ರಾಜಾರಿಷ್ಟ ಸೈನ್ಯನಾಶಗಳನ್ನು ಸೂಚಿಸುತ್ತದೆ. ಗುರು ಚಂಡಾಲಯೋಗದಿಂದ ದೇಶಕ್ಕೋಭೆಯೂ ಮಹಾಭಯವೂ ಹೇಳಲ್ಪಟ್ಟಿದೆ. ಶನಿಗೆ ತೃತೀಯದಲ್ಲಿ ಗುರುವು ಇರುವುದರಿಂದ ಕೋಟಿ ಶವಗಳು ಬೀಳುವುವು. ಗುರುವು ಅತಿಚಾರಗತನಾಗಿ, ಶನಿಯು ವಕ್ರಿಸಿರುವುದರಿಂದ ದುರ್ಭಿಕ್ಷ ಹಾಹಾಕಾರಗಳು ಸಂಭವಿಸುವವು. ಕಾರ್ತೀಕ ಮಾಸವು ಜಗತ್ಸಂಹಾರಕಾರಕವಾಗುವುದೋ ಏನೋ ಎಂಬ ಸಂಶಯವು ಕಾಣಬರುತ್ತದೆ.

ಒಟ್ಟಿನಲ್ಲಿ ಹಿಂದಿನ ವರ್ಷಕ್ಕಿಂತ ಈ ವರ್ಷ ಬೆಳೆ ಚೆನ್ನಾಗಿ ಬೆಳೆಯುತ್ತದೆ. ಬೆಲೆಗಳು ತಗ್ಗುವುದಿಲ್ಲ ಒಂದು ಒಗೆಯ ಶಾಂತಿಯು ಜನರಲ್ಲಿ ಉದ್ಭವಿಸುತ್ತೆ.

ಓಂ ಶಾಂತಿಃ ಶಾಂತಿಃ ಶಾಂತಿಃ

Opera 2nd glorious week
MANONMANI
ಅಪೇರಾ ನಲ್ಲಿ ಆಮೋಘ ಪುರ
ಮನೋನ್ಮಣಿ
ಪಿ.ಯು. ಚಿನ್ನಪ್ಪ, ಟಿ.ಆರ್. ರಾಜಕುಮಾರಿ, ಶ್ಯಾಮು, ಮಹಾಲಿಂಗಂ, ಕೆ.ಕೆ. ಪೆರುಮಾಳ್, ಎನ್. ಎಸ್. ಕೃಷ್ಣಮೂರ್ತಿ, ಎ. ನಂಜುರಾಜ್, ಕಾಳಿ ಎನ್. ರತ್ನಂ, ಮುಂತಾದವರು ಪಾತ್ರ ವಹಿಸಿರುವರು.